# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2042
2. ಮಾನ್ಯ ಸದಸ್ಯರ ಹೆಸರು : ಶ್ರೀ ಕಿಶೋರ್ ಕುಮಾರ್ ಪುತ್ತೂರ್
3. ಉತ್ತರಿಸುವ ದಿನಾಂಕ : 25.03.2026
4. ಉತ್ತರಿಸುವ ಸಚಿವರು : ಮಾನ್ಯ ಕಂದಾಯ ಸಚಿವರು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿರುವ ಒಟ್ಟು ಕಂದಾಯ ಗ್ರಾಮಗಳು ಎಷ್ಟು ಮತ್ತು ಸದರಿ ಕಂದಾಯ ಗ್ರಾಮಗಳಿಗೆ ಮಂಜೂರಾದ ಗ್ರಾಮ ಆಡಳಿತ ಅಧಿಕಾರಿಗಳ (VAO) ಹುದ್ದೆಗಳು ಎಷ್ಟು; ಭರ್ತಿಯಾದ ಮತ್ತು ಪ್ರಸ್ತುತ ಖಾಲಿ ಇರುವ ಹುದ್ದೆಗಳು ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | ರಾಜ್ಯದಲ್ಲಿ ಒಟ್ಟು 29326 ಕಂದಾಯ ಗ್ರಾಮಗಳಿವೆ. ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ ಕಲಂ 4ರನ್ವಯ ಹಲವಾರು ಗ್ರಾಮಗಳನ್ನು ಸೇರಿಸಿ ಒಂದು ಗ್ರಾಮ ಆಡಳಿತ ಅಧಿಕಾರಿ ವೃತ್ತವನ್ನು ರಚಿಸಲಾಗಿರುತ್ತದೆ. ಸದರಿ ವೃತ್ತಗಳಿಗೆ ಮಂಜೂರಾದ ಗ್ರಾಮ ಆಡಳಿತ ಅಧಿಕಾರಿಗಳ ಹುದ್ದೆಗಳು ಹಾಗೂ ಭರ್ತಿಯಾಗಿರುವ ಮತ್ತು ಖಾಲಿ ಇರುವ ಹುದ್ದೆಗಳ ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-1ರಲ್ಲಿ ನೀಡಲಾಗಿದೆ. |
| ಆ) | ರಾಜ್ಯದ ಒಟ್ಟು ಎಷ್ಟು ಕಂದಾಯ ಗ್ರಾಮಗಳಲ್ಲಿ ಗ್ರಾಮ ಆಡಳಿತಾಧಿಕಾರಿ (VAO) ಕಛೇರಿಗಳಿವೆ; ಅವುಗಳಲ್ಲಿ ಎಷ್ಟು ಕಛೇರಿಗಳಿಗೆ ಸ್ವಂತ ಕಟ್ಟಡಗಳಿವೆ ಮತ್ತು ಎಷ್ಟು ಕಛೇರಿಗಳು ಬಾಡಿಗೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿವೆ; ಮತ್ತು ಗ್ರಾಮ ಆಡಳಿತ ಅಧಿಕಾರಿ ಕಛೇರಿಗಳು ಇಲ್ಲದ ಗ್ರಾಮಗಳು ಎಷ್ಟು; ಕಛೇರಿ ನಿರ್ಮಿಸಲು ನಿವೇಶನ ಕಾಯ್ದಿರಿಸಿದ ಒಟ್ಟು ಗ್ರಾಮಗಳೆಷ್ಟು; (ಜಿಲ್ಲಾವಾರು ವಿವರವನ್ನು ನೀಡುವುದು) | ಕರ್ನಾಟಕ ಭೂ ಕಂದಾಯ ಅಧಿನಿಯಮ 1964ರ ಕಲಂ 4 ರನ್ವಯ ಹಲವಾರು ಗ್ರಾಮಗಳನ್ನು ಸೇರಿಸಿ ಒಂದು ಗ್ರಾಮ ಆಡಳಿತ ಅಧಿಕಾರಿ ವೃತ್ತವನ್ನು ರಚಿಸಲಾಗಿರುತ್ತದೆ. ಅದರಂತೆ, ರಾಜ್ಯದಲ್ಲಿ ಒಟ್ಟು 8310 ಗ್ರಾಮ ಆಡಳಿತ ಅಧಿಕಾರಿಗಳ ವೃತ್ತಗಳಿರುತ್ತವೆ. ಗ್ರಾಮ ಆಡಳಿತ ಅಧಿಕಾರಿಗಳ ಕಛೇರಿಗಳು ಸ್ವಂತ/ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವರ ಹಾಗೂ ಕಛೇರಿ ನಿರ್ಮಿಸಲು ನಿವೇಶನ ಕಾಯ್ದಿರಿಸಿರುವ ವೃತ್ತಗಳ ಜಿಲ್ಲಾವಾರು ವಿವರಗಳನ್ನು ಅನುಬಂಧ-2ರಲ್ಲಿ ನೀಡಲಾಗಿದೆ. |
| ಇ) | ಶೌಚಾಲಯ, ಕುಡಿಯುವ ನೀರು, ವಿದ್ಯುತ್, ಅಂತರ್ಜಾಲ (Internet) ಸಂಪರ್ಕ ಸೇರಿದಂತೆ ಮೂಲಭೂತ ಸೌಕರ್ಯಗಳಿಲ್ಲದ ಕಛೇರಿಗಳ ಸಂಖ್ಯೆ ಎಷ್ಟು; ಗ್ರಾಮ ಆಡಳಿತ ಅಧಿಕಾರಿಗಳ ಕಛೇರಿಗೆ ವಿದ್ಯುತ್ ಬಿಲ್ ಮತ್ತು ಅಂತರ್ಜಾಲ ಸಂಪರ್ಕ ವೆಚ್ಚವನ್ನು ಭರಿಸಲು ಸರಕಾರ ಅನುದಾನ ಬಿಡುಗಡೆ ಮಾಡುತ್ತಿದೆಯೇ; | ಗ್ರಾಮ ಆಡಳಿತ ಅಧಿಕಾರಿಗಳಿಗೆ ಆಯಾ ಕಂದಾಯ ವೃತ್ತಗಳ ವ್ಯಾಪ್ತಿಯಲ್ಲಿ ಬರುವ ಗ್ರಾಮ ಪಂಚಾಯಿತಿ /ಇತರೆ ಸರ್ಕಾರಿ ಕಟ್ಟಡಗಳು ಮತ್ತು ಕಂದಾಯ ಇಲಾಖೆಯ ಕಟ್ಟಡಗಳಲ್ಲಿ ಕರ್ತವ್ಯ ನಿರ್ವಹಿಸಲು ಕಛೇರಿ ವ್ಯವಸ್ಥೆಯನ್ನು ಕಲ್ಪಿಸಲಾಗಿರುತ್ತದೆ. ಪ್ರಸ್ತುತ ಸದರಿ ಕಛೇರಿಗಳಲ್ಲಿಯೇ ಇರುವ ಮೂಲ ಸೌಕರ್ಯಗಳನ್ನು ಉಪಯೋಗಿಸಲಾಗುತ್ತಿದ್ದು, ವಿದ್ಯುತ್ ವೆಚ್ಚವನ್ನು ಆಯಾ ಕಛೇರಿಗಳಿಗೆ ಸರ್ಕಾರದಿಂದ ಬಿಡುಗಡೆಯಾಗುವ |

| | | |
|---|---|---|
| ಈ) | ಮಾಡುತ್ತಿದ್ದಲ್ಲಿ, ಯಾವ ಖಾತೆಗೆ ಅನುದಾನ ಜಮೆ ಮಾಡಲಾಗುತ್ತದೆ; ಇತ್ತೀಚಿನ ಮೂರು ವರ್ಷಗಳಲ್ಲಿ ಸದರಿ ಉದ್ದೇಶಕ್ಕೆ ಬಿಡುಗಡೆ ಮಾಡಿದ ಅನುದಾನದ ಮೊತ್ತವೆಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | ಅನುದಾನದಲ್ಲಿಯೇ ಭರಿಸಲಾಗುತ್ತಿದೆ ಹಾಗೂ ಅಂತರ್ಜಾಲ ಸಂಪರ್ಕವನ್ನು ಒದಗಿಸಿರುವುದಿಲ್ಲ. ವಿದ್ಯುತ್ ಬಿಲ್ ಮತ್ತು ಅಂತರ್ಜಾಲ ಸಂಪರ್ಕ ವೆಚ್ಚಕ್ಕಾಗಿ ಯಾವುದೇ ಅನುದಾನವು ಪ್ರತ್ಯೇಕವಾಗಿ ಬಿಡುಗಡೆಯಾಗಿರುವುದಿಲ್ಲ. |
| ಉ) | ಎಲ್ಲಾ ಗ್ರಾಮ ಆಡಳಿತಾಧಿಕಾರಿ ಕಛೇರಿಗಳಿಗೆ ಸ್ವಂತ ಕಟ್ಟಡ ನಿರ್ಮಾಣ ಮಾಡಲು ಸರ್ಕಾರ ಯಾವುದಾದರೂ ವಿಶೇಷ ಯೋಜನೆ ರೂಪಿಸಿರುವುದೇ; ರೂಪಿಸಿದ್ದಲ್ಲಿ ಇದಕ್ಕೆ ಮೀಸಲಿರಿಸಿದ ಅನುದಾನದ ಮೊತ್ತ ಎಷ್ಟು. | ಗ್ರಾಮ ಆಡಳಿತ ಅಧಿಕಾರಿಗಳಿಗೆ ಗ್ರಾಮ ಪಂಚಾಯಿತಿ ಕಟ್ಟಡ ಮತ್ತು ಇತರೆ ಸರ್ಕಾರಿ ಕಟ್ಟಡಗಳಲ್ಲಿ ಕಛೇರಿ ವ್ಯವಸ್ಥೆಯನ್ನು ಮಾಡಿರುವುದರಿಂದ ಗ್ರಾಮ ಆಡಳಿತ ಅಧಿಕಾರಿ ಕಛೇರಿಗಳಿಗೆ ಸ್ವಂತ ಕಟ್ಟಡ ನಿರ್ಮಾಣ ಮಾಡುವ ಯಾವುದೇ ವಿಶೇಷ ಯೋಜನೆ ಸರ್ಕಾರದ ಮುಂದಿರುವುದಿಲ್ಲ. |

ಸಂಖ್ಯೆ: ಕಂಇ 50 ಬಿಎಸ್‌ಸಿ 2026

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು

ಅನುಬಂಧ-1

| ಕ್ರ. ಸಂ. | ಜಿಲ್ಲೆ | ರಾಜ್ಯದಲ್ಲಿರುವ ಒಟ್ಟು ಕಂದಾಯ ಗ್ರಾಮಗಳ ಸಂಖ್ಯೆ | ಸದರಿ ಕಂದಾಯ ಗ್ರಾಮಗಳಿಗೆ ಮಂಜೂರಾದ ಗ್ರಾಮ ಆಡಳಿತ ಅಧಿಕಾರಿಗಳ ಹುದ್ದೆಗಳ ಸಂಖ್ಯೆ | ಭರ್ತಿಯಾಗಿರುವ ಗ್ರಾಮ ಆಡಳಿತ ಅಧಿಕಾರಿಗಳ ಹುದ್ದೆಗಳ ಸಂಖ್ಯೆ | ಖಾಲಿ ಇರುವ ಗ್ರಾಮ ಆಡಳಿತ ಅಧಿಕಾರಿಗಳ ಹುದ್ದೆಗಳ ಸಂಖ್ಯೆ |
|---|---|---|---|---|---|
| 1 | ಬೆಂಗಳೂರು ನಗರ | 866 | 251 | 219 | 32 |
| 2 | ಬೆಂಗಳೂರು ಗ್ರಾಮಾಂತರ | 936 | 223 | 169 | 54 |
| 3 | ಚಿತ್ರದುರ್ಗ | 1225 | 356 | 323 | 33 |
| 4 | ದಾವಣಗೆರೆ | 892 | 266 | 254 | 12 |
| 5 | ಕೋಲಾರ | 1797 | 305 | 262 | 43 |
| 6 | ತುಮಕೂರು | 2734 | 648 | 573 | 75 |
| 7 | ಬೆಂಗಳೂರು ದಕ್ಷಿಣ | 839 | 275 | 223 | 52 |
| 8 | ಚಿಕ್ಕಬಳ್ಳಾಪುರ | 1522 | 289 | 246 | 43 |
| 9 | ಶಿವಮೊಗ್ಗ | 1410 | 376 | 333 | 43 |
| 10 | ಮೈಸೂರು | 1380 | 479 | 416 | 63 |
| 11 | ಚಾಮರಾಜನಗರ | 407 | 258 | 213 | 45 |
| 12 | ಮಂಡ್ಯ | 1487 | 475 | 407 | 68 |
| 13 | ಹಾಸನ | 2451 | 459 | 409 | 50 |
| 14 | ಚಿಕ್ಕಮಗಳೂರು | 1137 | 291 | 266 | 25 |
| 15 | ಕೊಡಗು | 534 | 134 | 124 | 10 |
| 16 | ಉಡುಪಿ | 267 | 215 | 193 | 22 |
| 17 | ದಕ್ಷಿಣ ಕನ್ನಡ | 422 | 326 | 280 | 46 |
| 18 | ಬೆಳಗಾವಿ | 1227 | 648 | 576 | 72 |
| 19 | ವಿಜಯಪುರ | 661 | 274 | 256 | 18 |
| 20 | ಬಾಗಲಕೋಟೆ | 603 | 297 | 267 | 30 |
| 21 | ಧಾರವಾಡ | 420 | 235 | 214 | 21 |
| 22 | ಗದಗ | 357 | 232 | 197 | 35 |
| 23 | ಹಾವೇರಿ | 696 | 295 | 255 | 40 |
| 24 | ಉತ್ತರ ಕನ್ನಡ | 1346 | 337 | 321 | 16 |
| 25 | ಕಲಬುರಗಿ | 926 | 410 | 347 | 63 |
| 26 | ರಾಯಚೂರು | 891 | 324 | 304 | 20 |
| 27 | ಕೊಪ್ಪಳ | 631 | 193 | 175 | 18 |
| 28 | ಬಳ್ಳಾರಿ | 296 | 226 | 207 | 19 |
| 29 | ಬೀದರ್ | 641 | 344 | 310 | 34 |
| 30 | ಯಾದಗಿರಿ | 160 | 200 | 192 | 08 |
| 31 | ವಿಜಯನಗರ | 165 | 201 | 196 | 05 |
| | **ಒಟ್ಟು** | **29326** | **9842** | **8727** | **1115** |

## ಅನುಬಂಧ-2

| ಕ್ರ. ಸಂ. | ಜಿಲ್ಲೆ | ಗ್ರಾಮ ಆಡಳಿತ ಅಧಿಕಾರಿಗಳ ಕಛೇರಿಗಳ ಸಂಖ್ಯೆ | ಸ್ವಂತ/ಸರ್ಕಾರಿ ಕಟ್ಟಡಗಳನು ಹೊಂದಿರುವ ಕಛೇರಿಗಳ ಸಂಖ್ಯೆ | ಬಾಡಿಗೆ ಕಟ್ಟಡಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕಛೇರಿಗಳ ಸಂಖ್ಯೆ | ಗ್ರಾಮ ಆಡಳಿತ ಅಧಿಕಾರಿ ಕಛೇರಿ ನಿರ್ಮಿಸಲು ನಿವೇಶನ ಕಾಯ್ದಿರಿಸಿದ ಸಂಖ್ಯೆ |
|---|---|---|---|---|---|
| 1 | ಬೆಂಗಳೂರು ನಗರ | 201 | 201 | - | 19 |
| 2 | ಬೆಂಗಳೂರು ಗ್ರಾಮಾಂತರ | 192 | 187 | 05 | 44 |
| 3 | ಚಿತ್ರದುರ್ಗ | 314 | 314 | - | - |
| 4 | ದಾವಣಗೆರೆ | 233 | 233 | - | - |
| 5 | ಕೋಲಾರ | 263 | 263 | - | - |
| 6 | ತುಮಕೂರು | 564 | 564 | - | - |
| 7 | ಬೆಂಗಳೂರು ದಕ್ಷಿಣ | 245 | 240 | 05 | - |
| 8 | ಚಿಕ್ಕಬಳ್ಳಾಪುರ | 247 | 247 | - | - |
| 9 | ಶಿವಮೊಗ್ಗ | 326 | 326 | - | 09 |
| 10 | ಮೈಸೂರು | 432 | 432 | - | 30 |
| 11 | ಚಾಮರಾಜನಗರ | 222 | 222 | - | 01 |
| 12 | ಮಂಡ್ಯ | 416 | 416 | - | - |
| 13 | ಹಾಸನ | 402 | 402 | - | 74 |
| 14 | ಚಿಕ್ಕಮಗಳೂರು | 237 | 237 | - | 52 |
| 15 | ಕೊಡಗು | 108 | 108 | - | - |
| 16 | ಉಡುಪಿ | 186 | 186 | - | - |
| 17 | ದಕ್ಷಿಣ ಕನ್ನಡ | 286 | 276 | 10 | - |
| 18 | ಬೆಳಗಾವಿ | 540 | 514 | 26 | 37 |
| 19 | ವಿಜಯಪುರ | 206 | 206 | - | - |
| 20 | ಬಾಗಲಕೋಟೆ | 238 | 174 | 64 | 62 |
| 21 | ಧಾರವಾಡ | 198 | 198 | - | - |
| 22 | ಗದಗ | 194 | 194 | - | - |
| 23 | ಹಾವೇರಿ | 259 | 205 | 54 | 36 |
| 24 | ಉತ್ತರ ಕನ್ನಡ | 239 | 231 | 08 | 136 |
| 25 | ಕಲಬುರಗಿ | 344 | 344 | - | - |
| 26 | ರಾಯಚೂರು | 269 | 238 | 31 | - |
| 27 | ಕೊಪ್ಪಳ | 157 | 157 | - | - |
| 28 | ಬಳ್ಳಾರಿ | 165 | 116 | 49 | 49 |
| 29 | ಬೀದರ್ | 302 | 176 | 126 | 01 |
| 30 | ಯಾದಗಿರಿ | 160 | 160 | - | - |
| 31 | ವಿಜಯನಗರ | 165 | 165 | - | - |
| | **ಒಟ್ಟು** | **8310** | **7932** | **378** | **550** |